# ಅರ್ಥ: ವಿಶಿಷ್ಟ ಆರೋಗ್ಯ ಕೇಂದ್ರ

(ಮೊದಲನೇ ಪುಟದಿಂದ)

ಕಾಣುವ ಎಂಬ್ಲೆಮ್ ಇವರ ಕಾರ್ಯಸ್ವರೂಪದ ಪರಿಚಯ ನೀಡುತ್ತದೆ. ಎಲ್ಲ ಬಗೆಯ ಸಳಿಯ ವೈದ್ಯಕೀಯ ಪದ್ಧತಿಗಳ ಉತ್ತಮ ಅಂಶಗಳೊಂದಿಗೆ ಆಧುನಿಕ ವೈದ್ಯ ವಿಜ್ಞಾನದ ಸತ್ವವನ್ನೂ ಕೂಡಿಸಿಕೊಂಡು ಸ್ವಾಸ್ಥ್ಯ ಬದುಕಿಗೆ ಅಡಿಪಾಯ ಹಾಕುವುದೇ ಇದರ ಗುರಿ. ಅದನ್ನು ಸೂಚಿಸುವಂತೆ ಪ್ರಕೃತಿದತ್ತವಾದ ಅಮೂಲ್ಯ ವಸ್ತುಗಳನ್ನು ಸೇರಿಸಿಕೊಳ್ಳುವುದನ್ನು ಪ್ರತಿನಿಧಿಸುವ ಎಲೆಗಳು, ನವ ವಿಜ್ಞಾನದೊಂದಿಗೆ. ಸೇರಿ ಸಂಪೂರ್ಣ ಆರೋಗ್ಯ ಹೊಂದಿ ಸಂತಸದ ಕೂಗನ್ನು ಸಾರುತ್ತಿರುವ ಜೀವಿಯ ಸಂಕೇತವೇ ಈ 'ಎಂಬ್ಲೆಮ್'.

## ವೈವಿಧ್ಯಮಯ ಸೌಲಭ್ಯ

ಸಲಹಾ ಕೋಣೆ, ಪತ್ರಕರ್ತರೊಂದಿಗೆ ಪ್ರತ್ಯೇಕ ಸಂದರ್ಶನ ಕೋಣೆ, ಪಂಚಕರ್ಮ ಕ್ರಿಯೆಗಳಿಗೆ ಬೇಕಾಗುವ ಸ್ಟೀಮ್ ಬಾತ್‌ರೂಂ, ಶಿರೋಧಾರಾ ನೀಡುವ ಕೋಣೆ, ಮುಖ ಕಾಂತಿಗೆ ಅಗತ್ಯವಾದ ಚಿಕಿತ್ಸೆಗಳನ್ನು ಒಳಗೊಂಡ ಕಾಸ್ಮೆಟಾಲಜಿಯ ಕೋಣೆ, ಸೂರ್ಯ ಕಿರಣದ ಶಾಖಕ್ಕೆ ಒಳಪಡಿಸುವ ಕೋಣೆ, ಧ್ಯಾನ ಮಂದಿರ ಅಲ್ಲದೆ ಬಾಣಂತಿ ಮಗುವಿಗೆ ಒಂದು ಪ್ರತ್ಯೇಕ ಹಾಗೂ ವಿಶಾಲವಾದ ಕೋಣೆ-ಇವಿಷ್ಟೂ ಎಲ್ಲ ಬಗೆಯ ಆಧುನಿಕ ಸೌಲಭ್ಯಗಳನ್ನು ಈ ಕೇಂದ್ರ ಹೊಂದಿದೆ. ಮಗು, ಬಾಣಂತಿಯ ಸಲುವಾಗಿರುವ ವಿಶೇಷ ಬಗೆಯ ಸ್ನಾನಗೃಹದ್ದೇ ಒಂದು ಆಕರ್ಷಣೆ. ಮಗುವನ್ನು ಕಾಲಮೇಲೆ ಮಲಗಿಸಿಕೊಂಡು ಸ್ನಾನಮಾಡಿಸಲು ಅನುವಾಗುವ ವಿಶಾಲವಾದ ಬಾತ್‌ಟಬ್ ಮಾದರಿಯ ನೀಳ ಬಚ್ಚಲು, ಆರೋಗ್ಯಕ್ಕೆ ಅಗತ್ಯವಾದ ಹಲವು ಬಗೆಯ ನಾರು-ಬೇರುಗಳನ್ನು ಹಾಕಿ ಕುದಿಸಲು ಬೇಕಾದ ಹಂಡೆ, ಒಲೆಗೆ ಸೌದೆಯ ಉರಿ ಹೊರಗಿನಿಂದ ಹಾಕುವ ವ್ಯವಸ್ಥೆ ಎಲ್ಲ ಹಳ್ಳಿಯ ಮನೆಯೊಂದರ ಬಾಣಂತನದ ನೆನಪು ಕೊಡುವುದರೊಂದಿಗೆ, ಆಧುನಿಕತೆಯ ಸೌಲಭ್ಯವನ್ನೂ ಹೊಂದಿರುವುದನ್ನು ಸೂಚಿಸುತ್ತದೆ.

ಆಯುರ್ವೇದದ ಪ್ರಕಾರ ಖಾದ್ಯ ಪದಾರ್ಥಗಳು ತಯಾರಾಗಲು ಅಡಿಗೆ ಕೋಣೆ ಪ್ರತ್ಯೇಕವಾಗಿದೆ. ಡಾ. ಸಂಜಯ್, ಡಾ. ಪ್ರಶಾಂತ್, ಡಾ. ವೇಣುಗೋಪಾಲ್ ಹಾಗೂ ರಜತ್ ನೇತೃತ್ವದಲ್ಲಿ ನಡೆಯುವ ಈ ಸಂಸ್ಥೆಯಲ್ಲಿ ಆರು ಜನ ವೈದ್ಯರೂ, ಇತರ ಮೂವರು ಸಿಬ್ಬಂದಿ ವರ್ಗದವರೂ ಇದ್ದಾರೆ. ಹಲವು ಕ್ಷೇತ್ರಗಳಲ್ಲಿ ನುರಿತ, ಪರಿಣತ ವೈದ್ಯರು ಹೊರ ಊರುಗಳಿಂದಲೂ ಬಂದು ರೋಗಿಗಳ ಚಿಕಿತ್ಸೆಗೆ ನೆರವಾಗುತ್ತಾರೆ. ಎಲ್ಲ ಚಿಕಿತ್ಸೆಗಳನ್ನು



ಅರ್ಹ, ಸಮರ್ಥ ವೈದ್ಯರೇ ನಡೆಸುತ್ತಾರೆ.

ಸಂಸ್ಥೆಯ ಮತ್ತೊಂದು ಗಮನ ಸೆಳೆಯುವ ಯೋಜನೆ 'ಟ್ರಾವೆಲರ್ಸ್ ಪ್ಯಾಕೇಜ್'. ವಿದೇಶಗಳಿಂದ ಬರುವ ವಿದೇಶೀಯರಿಗಾಗಲೀ, ಕೆಲಸದ ನಿಮಿತ್ತ ಆಗಾಗ ವಿದೇಶಕ್ಕೆ ಹೋಗಿ ಬರುವ ನಮ್ಮವರಿಗೇ ಆಗಲೀ ಕಾಡುವ ಒಂದು ಸಾಮಾನ್ಯ ಸಮಸ್ಯೆ 'ಜೆಟ್‌ಲ್ಯಾಗ್'. ಇದು ಕೆಲವರಿಗೆ 4-5 ದಿನಗಳವರೆಗೂ ಹೆಚ್ಚು ಕಾಲ ತೊಂದರೆ ಕೊಡುವುದೂ ಉಂಟು. ಅಂತಹ ಪರಿಸ್ಥಿತಿಗಳಲ್ಲಿ ಅವರ ಕೆಲಸ, ಕಾರ್ಯಗಳಿಗೆ ತೊಂದರೆಯಾಗದಂತಿರಲು ಒಂದು ಚಿಕಿತ್ಸಾ ವಿಧಾನ ಇಲ್ಲಿದೆ. ಯಾರಿಗೇ ಆದರೂ ಈ ಜೆಟ್‌ಲ್ಯಾಗ್ 24 ಗಂಟೆಗಳಲ್ಲಿ ಇಲ್ಲವಾಗುವಂತೆ ಮಾಡುವ ಚಿಕಿತ್ಸೆ ಇಲ್ಲಿ ಲಭ್ಯ. ಇವಲ್ಲದೆ ಇನ್ನಿತರ ಚಿಕಿತ್ಸೆಗಳೆಂದರೆ ಕಾಸ್ಮೆಟಾಲಜಿ, ರೆಜುವಿನೇಷನ್, ಸ್ವಸ್ಥ ಆರೋಗ್ಯ ರಕ್ಷಣೆ, ಇನ್‌ಫರ್ಟಿಲಿಟಿ ಸಮಸ್ಯೆ, ಪೈಲ್ಸ್, ಕಿಡ್ನಿಯಲ್ಲಿ ಕಲ್ಲುಗಳು ಮುಂತಾದ ಹತ್ತಾರು ತೊಂದರೆಗಳಿಗೆ ಇಲ್ಲಿ ಸೂಕ್ತ ವೈದ್ಯಕೀಯ ನೆರವು ದೊರೆಯುತ್ತದೆ.

ಡಾ. ವೇಣುಗೋಪಾಲ್ ಮೈಸೂರಿನಿಂದ ವಾರದಲ್ಲಿ 2-3 ದಿನ ಇಲ್ಲಿದ್ದು ರೇಖಿ ತರಗತಿಗಳನ್ನು ನಡೆಸುವುದರೊಂದಿಗೆ ಕೌನ್ಸಿಲಿಂಗ್ ಮೂಲಕ ರೋಗಿಗಳಲ್ಲಿ ಹೆಚ್ಚಿನ ಸುಧಾರಣಾ ಫಲಿತಾಂಶವನ್ನು ತರುತ್ತಿದ್ದಾರೆ. ನಗರಗಳ ಉದ್ವೇಗಭರಿತ ಬದುಕು ಎಲ್ಲ ಬಗೆಯ ರೋಗಗಳಿಗೆ ದಾರಿ ಮಾಡುವ ಅಪಾಯವನ್ನು ತಿಳಿಸಿ, ಮನಸ್ಸಿನ ಶಾಂತಿಯನ್ನು ಕಾಪಾಡಿಕೊಳ್ಳುವ ಹಲವು ಉಪಯುಕ್ತ ಮಾರ್ಗಗಳನ್ನು ಸೂಚಿಸುತ್ತಾರೆ. ಯಾವುದೇ ಔಷಧಿಯ ಸೇವನೆಗಿಂತ ಪರಿಣಾಮಕಾರೀ ಔಷಧಿ ಮನಸ್ಸಿಗೆ ಕೊಡುವ ಹಿತಕರವಾದ, ಅಗತ್ಯದ ಸಲಹೆಗಳೆಂಬ ಸತ್ಯ ಅವರಿಗೆ ಅನುಭವವೇದ್ಯವಾಗಿದೆ. ರೋಗಿಗಳಿಗೂ ಅದರ ಅರಿವು ಮೂಡಿಸುವಲ್ಲಿ ಸಫಲರಾಗುತ್ತಿದ್ದಾರೆ.

ಡಾ. ಸಂಜಯ್ ಮೂರನೇ ವರ್ಷದ ಆಯುರ್ವೇದ ಪದವಿಯಲ್ಲಿ ಓದುತ್ತಿದ್ದಾಗ ಮನಸ್ಸಿನಲ್ಲಿ ಮೂಡಿದ ಚಿಂತನೆಯ ಫಲವೇ 'ಅರ್ಥ' ಎಂಬ ಈ ಸಂಸ್ಥೆಯ ಹುಟ್ಟಿಗೆ ಕಾರಣ. ಸಂಪೂರ್ಣವಾಗಿ ಆಯುರ್ವೇದದ ಮಹತ್ವವನ್ನು ತಿಳಿಸಿ ಆರೋಗ್ಯವಂತ ಸಮಾಜದ ನಿರ್ಮಾಣದಲ್ಲಿ ತಮ್ಮ ಕೊಡುಗೆಯನ್ನೂ ನೀಡಬೇಕೆಂಬ ಹಂಬಲವೇ ಇಂತಹದೊಂದು ಸಂಸ್ಥೆ ಪ್ರಾರಂಭಿಸಬೇಕೆಂಬ ಪ್ರಯತ್ನಕ್ಕೆ ಕಾರಣವೆನ್ನುತ್ತಾರೆ. ಡಾ. ಸಂಜಯ್.

ಅರ್ಥ
**1142, 12ನೇ ಮೈನ್, 1ನೇ ಕ್ರಾಸ್,**
ಹೆಚ್.ಎ.ಎಲ್. 2ನೇ ಹಂತ
ಇಂದಿರಾನಗರ, ಬೆಂಗಳೂರು.